ಗ್ಯಾನಿ ಇಡೀ ಊರಿಗೆಲ್ಲ ಏಕ್‌ದಂ ಪ್ರಖ್ಯಾತನಾಗಿದ್ದು ಅವನಿನ್ನೂ ಮಿಡ್ಲ್‌ಸ್ಕೂಲಲ್ಲಿ ಆರನೇ ಕ್ಲಾಸು ಓದುತ್ತಿರುವಾಗ. ಊರಿನಿಂದ ಒಂದು ಮೈಲು ದೂರದಲ್ಲಿರುವ ಅರಕೆರೆಯಲ್ಲಿ ಸ್ಕೂಲು ಇದ್ದುದರಿಂದ ಹತ್ತು–ಹನ್ನೆರಡು ಹುಡುಗ–ಹುಡಗೀರು ದಿನಾ ಓಡಾಡುತ್ತಿದ್ದರು. ಹೀಗೆ ಓಡಾಡುವಾಗ ದಾರಿಯಲ್ಲಿ ಒಮ್ಮೊಮ್ಮೆ ಬಸ್ಸು, ಲಾರಿ, ಕಾರು ಮುಂತಾದುವುಗಳು ಹುಡುಗರನ್ನು ಊರಿನಿಂದ ಅರಕೆರೆಗೆ, ಅರಕೆರೆಯಿಂದ ಊರಿಗೆ ಸಾಗಿಸುತ್ತಿದ್ದವು. ಹೀಗೆ ಒಮ್ಮೆ ಗ್ಯಾನಿ ಸ್ಕೂಲು ಬಿಟ್ಟ ನಂತರ ಒಮ್ಮೆಲೆ ನಾಪತ್ತೆಯಾಗಿಬಿಟ್ಟಿದ್ದ. ಅವನು ನಾಪತ್ತೆಯಾಗಿದ್ದು ಹುಡುಗರಲ್ಲಿ ಯಾರಿಗೂ ಗೊತ್ತಿರಲಿಲ್ಲ. ಏಕೆಂದರೆ ಆರನೇ ಕ್ಲಾಸಿನಲ್ಲಿ ಧುಮ್‌ಕಿ ಹೊಡೆದಿದ್ದ ಗ್ಯಾನಿಯ ಸಹಪಾಠಿಗಳು ಏಳರಲ್ಲಿ ಇದ್ದರು. ಆರನೇ ಕ್ಲಾಸಿನಲ್ಲಿ ಹಿರಿಯ ಅನುಭವಿಯಾಗಿದ್ದ ಗ್ಯಾನಿ ಇತರರನ್ನು ಕ್ಷಣಿಕವಾಗಿ ಪರಿಗಣಿಸುತ್ತಿದ್ದರಿಂದ ಒಂಟಿಯಾಗಿಯೇ ಕೊರಳಿಗೆ ಚೀಲ ಹಾಕಿಕೊಂಡು ತೊಡರುಗಾಲು ಹಾಕುತ್ತಾ ಸಾಲುಮರಗಳನ್ನು ಎಣಿಸುತ್ತಿದ್ದ. ದನಗಳೆಲ್ಲಾ ಊರೊಳಗೆ ಬರುತ್ತಿದ್ದಂತೆಯೇ ಗ್ಯಾನಿಯ ಅಪ್ಪ ತುಕರಾಮಣ್ಣನ ಭರ್ದಂಡು ಓಡಾಟ, ಚೀರಾಟಗಳು ಊರವರಿಗೆಲ್ಲಾ ಮುಟ್ಟಿದಾಗಲೇ ಗ್ಯಾನಿ ಸ್ಕೂಲಿನಿಂದ ಬಂದಿಲ್ಲವೆಂದು ತಿಳಿದದ್ದು. ತುಕರಾಮಣ್ಣ ಇಂದು ಕೇರಿಯಲ್ಲಿ 'ನನ್ನ ಮಗನನ್ನು ಕಂಡಿರಾ... ಕಂಡಿರಾ...' ಎಂದು ವಿಚಾರಿಸುತ್ತಿದ್ದಾಗ ಅವನ ಹೆಂಡತಿ ತುಳಜಕ್ಕ ಇನ್ನೊಂದು ಕೇರಿಯಲ್ಲಿ ಒಂದೇ ಒಂದು ಪುತ್ರರತ್ನವಾದ ಮಗನನ್ನು ನೋಡಿದಿರಾ ಎಂದು ಕೇಳುತ್ತಿದ್ದಳು. ನಿಜವಾಗಿಯೂ ಊರವರಿಗೆ ಗ್ಯಾನಿ ಎಂಬ ಹುಡುಗ ಇಂಥವನೇ ಎಂದು ಎಂದೂ ಗಮನ ಹರಿಸಲು ಅವಕಾಶವೇ ಬಂದಿರಲಿಲ್ಲ. ಈಗ ಬಂದಿತ್ತು. ಈಗ ಎಲ್ಲರೂ ಗ್ಯಾನಿ ಎಲ್ಲಿರುತ್ತಿದ್ದ. ಎಲ್ಲಿ ಗೋಲಿ ಆಡುತ್ತಿದ್ದ, ಎಲ್ಲಿ ಮಂಡಕ್ಕಿ ಉಂಡೆ ತಿನ್ನುತ್ತಾ ನಿಲ್ಲುತ್ತಿದ್ದ. ಅವನ ಇತರೆ ಹವ್ಯಾಸಗಳೇನು ಎಂದು ಗುಸುಗುಸು ಮಾತಾಡಿಕೊಳ್ಳಲು ತೊಡಗಿದ್ದರು. ಗ್ಯಾನಿಯ ಆಪ್ತ ಸ್ನೇಹಿತನಾದ ಕೆಂಚನ ಬಳಿ ತುಕರಾಮ, ತುಳಜಕ್ಕ ಬಂದು ಪೀಡಿಸತೊಡಗಿದರು. ಅವರಿಬ್ಬರ ಕೌತುಕ, ದುಗುಡಗಳನ್ನು ಕಂಡು ಕೆಂಚ ಹೆದರಿ ಚಿಳ್ಳೇ... ಚಿಳ್ಳೆ... ಸ್ವರ ಹೊರಡಿಸುತ್ತಾ ಅಳತೊಡಗಿದ್ದ.

ವಾಸ್ತವವಾಗಿ ಗ್ಯಾನಿ ಸ್ಕೂಲು ಬಿಟ್ಟ ನಂತರ ಒಬ್ಬನೇ ಲಾರಿಯೊಂದಕ್ಕೆ ಸೆಲ್ಯೂಟ್ ಹೊಡೆದು ನಿಂತ. ಅವರು ನಿಲ್ಲಿಸಿ ಹತ್ತಿಸಿಕೊಂಡರು. ಅವರ ಸಂದಿಯೊಳಗೆ ಸಿಕ್ಕಿಕೊಂಡ ಪೀಚಲು ಗ್ಯಾನಿಗೆ ಊರು ಬಂದರೂ ಕಾಣಿಸದೆ ಹೊನ್ನಾಳಿಗೆ ಹೋಗಿ ಬಿಟ್ಟಿದ್ದ. ಅವನು ಹೊನ್ನಳಿಗೆ ವಾರವಾರಾ ಅವರವ್ವ ತುಳಜಕ್ಕನ ಹಿಂದೆ ಸಂತೆಗೆ ಬರುತ್ತಿದ್ದನಾದ್ದರಿಂದ ಕೆಲವು ಜಾಗಗಳು ಗೊತ್ತಿದ್ದವು. ಗ್ಯಾನಿಯ ಜೋಬಲ್ಲಿ ನಾಲ್ಕಾಣೆಯಿದ್ದುದರಿಂದ ಏನಾದ್ರೂ ತಿನ್ನೋಣವೆಂದು ಹಾಗೆಯೇ ಬಸ್ ಸ್ಟ್ಯಾಂಡ್ ಕಡೆ ಕಾಲಿಟ್ಟ. ಕಾಲಿಡುತ್ತಿದ್ದಂತೆ ಕೆಳಗಿನ ಮನೆ ಸೇಕ್ರಣ್ಣ ಸಿಕ್ಕು ಗ್ಯಾನಿಗೂ ಗ್ಯಾನಿಯ ಅಪ್ಪನಿಗೂ ಬಯ್ದ. ಬಯ್ಯಲಿಕ್ಕೆ ಅವರಪ್ಪ ಇವನು ಹೊಲಿಯಲು ಹಾಕಿದ್ದ ಅಂಗಿಯನ್ನು ಸಕಾಲಕ್ಕೆ ಕೊಡದೇ ಹೋಗಿದ್ದು ಕಾರಣವಾಗಿತ್ತು. ಸೇಕ್ರಣ್ಣ ಗ್ಯಾನಿ ಒಬ್ಬನೇ ಬಂದಿರುವುದು ಕಂಡು ಸಿಟ್ಟು ಬಂದರೂ ತಾನು, ಫಸ್ಟ್‌ಷೋ ಸಿನಿಮಾ ನೋಡಿಕೊಂಡು ಊರಿಗೆ ಹೋಗಲು ಒಂದು ಜೀವ ಸಿಕ್ಕಂತಾಯ್ತಲ್ಲ ಎಂಬ ಸಮಾಧಾನವಾಗಿ ಅವನಿಗೆ ದೋಸೆ ತಿನ್ನಿಸಿ ಭಕ್ತ ಕನಕದಾಸ ತೋರಿಸಿದ. ಗ್ಯಾನಿಯಂತೂ ಕಣ್ಣು ಮೂಗು ಬಾಯಿಗಳನ್ನು ತೆರೆದು ಸಿನಿಮಾ ನೋಡಿದ. ನೋಡಿ ಖುಷಿಯಿಂದ. ಸುಖದಿಂದ ಉನ್ಮಾದಗೊಂಡ. ಆ ಉನ್ಮಾದ ಸೇಕ್ರಣ್ಣನೊಟ್ಟಿಗೆ ಊರಕಡೆ ನಡೆಯಲು ತೊಡಗಿದಾಗ ಹೊರಟುಹೋಯ್ತು. ಸಣಕಲು ಮೈಯ ಗ್ಯಾನಿಗೆ ಯಾವಾಗಲೂ ಕಾಲುಗಳಲ್ಲಿ ಗಾಯಗಳಿರುತ್ತಿದ್ದವು. ತೊಡರುಗಾಲು ಹಾಕಿ